# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(6)ಪಿಆರ್/ಇ-18195/21-22

ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 03.03.22

**ಕಛೇರಿ ಆದೇಶ**

ವಿಷಯ: ಶ್ರೀ ದೇವೇಂದ್ರು ನಾಯಕ್, ಕಾರ್ಯಪಾಲಕ ಅಭಿಯಂತರರು ಇವರನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಲೋಕೋಪಯೋಗಿ ಇಲಾಖೆಯ ಸಂಖ್ಯೆ: ಲೋಇ 400 ಸೇಎಸು 2021, ದಿನಾಂಕ: 08-02-2022

-----------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತದ ಅಧಿಸೂಚನೆಯಲ್ಲಿ ಲೋಕೋಪಯೋಗಿ ಇಲಾಖೆ ಅಭಿಯಂತರರಾದ ಶ್ರೀ ದೇವೇಂದ್ರು ನಾಯಕ್, ಕಾರ್ಯಪಾಲಕ ಅಭಿಯಂತರರು ಇವರು ಜಲಸಂಪನ್ಮೂಲ ಇಲಾಖೆಯಲ್ಲಿ ಶಾಶ್ವತ ವರ್ಗಾವಣೆ ಹೊಂದಿರುವುದರಿಂದ ಇವರ ಸೇವೆಯನ್ನು ಸಾರ್ವಜನಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಮಾತೃ ಇಲಾಖೆಯಾದ ಜಲಸಂಪನ್ಮೂಲ ಇಲಾಖೆಗೆ ಹಿಂದಿರುಗಿಸಿ, ತಕ್ಷಣವೇ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಸದರಿಯವರನ್ನು ಜಲಸಂಪನ್ಮೂಲ ಇಲಾಖೆಯಲ್ಲಿ ವರದಿ ಮಾಡಿಕೊಳ್ಳುವ ಸಲುವಾಗಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಯಿಂದ ಬಿಡುಗಡೆಗೊಳಿಸುವಂತೆ ಕೋರಿರುವುದನ್ನು ಪರಿಗಣಿಸಿ, ಪ್ರಸ್ತುತ ಲೋಕೋಪಯೋಗಿ ಇಲಾಖೆಯಿಂದ ಎರವಲು ಸೇವೆಯ ಮೇಲೆ ಪಾಲಿಕೆಗೆ ನಿಯೋಜನೆಗೊಂಡು ಕಾರ್ಯಪಾಲಕ ಅಭಿಯಂತರರು (ಯೋಜನೆ-ಯಲಹಂಕ) ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತಿಗೊಳಪಡಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸೇವೆಯಿಂದ ಬಿಡುಗಡೆ ಮಾಡಿ ಜಲಸಂಪನ್ಮೂಲ ಇಲಾಖೆಯಲ್ಲಿ ವರದಿ ಮಾಡಿಕೊಳ್ಳುವಂತೆ ಆದೇಶಿಸಿದೆ.

**ಷರತ್ತುಗಳು:-**

1. ಸದರಿ ಅಭಿಯಂತರರು ನಗರ ಪಾಲಿಕೆಯ ಸೇವಾ ಅವಧಿಯಲ್ಲಿ ನಗರ ಪಾಲಿಕೆಗೆ ಯಾವುದೇ ಆರ್ಥಿಕ ಬಾಕಿಯನ್ನು ಉಳಿಸಿಕೊಂಡಿದ್ದಲ್ಲಿ ಸದರಿಯವರಿಂದ ವಸೂಲಾತಿ ಮಾಡುವ ಷರತ್ತಿಗೊಳಪಡಿಸಿದೆ.
2. ಸದರಿ ಅಭಿಯಂತರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇದ್ದಲ್ಲಿ ನಿಯಮಾನುಸಾರ ಕ್ರಮಜರುಗಿಸುವ ಷರತ್ತಿಗೊಳಪಡಿಸಿದೆ.
3. ಪಾಲಿಕೆಯ ಹಿಂದಿನ ವರ್ಷಗಳ ಆಡಿಟ್ ವರದಿಗಳಲ್ಲಿ ಯಾವುದೇ ಆರ್ಥಿಕ ಬಾಕಿಯನ್ನು ಸದರಿಯವರಿಂದ ವಸೂಲಾತಿ ಮಾಡಲು ಸೂಚಿಸಿದಲ್ಲಿ, ಅಂತಹ ಮೊತ್ತವನ್ನು ವಸೂಲಾತಿ ಮಾಡುವ ಷರತ್ತಿಗೊಳಪಡಿಸಿದೆ ಹಾಗೂ ಆಕ್ಷೇಪಣೆಗಳಿದ್ದಲ್ಲಿ ಅವುಗಳಿಗೆ ಸಮರ್ಪಕ ಉತ್ತರ ನೀಡುವ ಷರತ್ತು ವಿಧಿಸಿದೆ.
4. ಸದರಿಅಭಿಯಂತರರು ನಗರ ಪಾಲಿಕೆಯ ವಸತಿಗೃಹದಲ್ಲಿ ವಾಸಿಸುತ್ತಿದ್ದಲ್ಲಿ ಕೂಡಲೇ ತೆರವುಗೊಳಿಸುವ ಷರತ್ತಿಗೊಳಪಡಿಸಿದೆ.
5. ವಾಕಿ ಟಾಕಿ, ಮೊಬೈಲ್ ಫೋನ್, ಸಿಮ್‌ಕಾರ್ಡ್, ಹೆಲ್ಮೆಟ್‌ಕಾರ್ಡ್, ಗುರುತಿನ ಚೀಟಿ (Identity card) ಹಾಗೂ ಲ್ಯಾಪ್‌ಟಾಪ್‌ಗಳನ್ನು ಪಾಲಿಕೆಯಿಂದ ಪಡೆದಿದ್ದಲ್ಲಿ, ಇವುಗಳನ್ನು ಪಾಲಿಕೆಗೆ ಹಿಂದಿರುಗಿಸುವ ಷರತ್ತಿಗೊಳಪಡಿಸಿದೆ.

ಮಾನ್ಯ ಮುಖ್ಯ ಆಯುಕ್ತರು ರವರ ಆದೇಶದ ಮೇರೆಗೆ)

Office of the IT Advisor
283 8/3/22

3/3/22
ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
03/03/2022

**ಪ್ರತಿಯನ್ನು :**

: ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
: ವಿಶೇಷ ಆಯುಕ್ತರು (ಯೋಜನೆ) / ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ರವರಿಗೆ ಕಳುಹಿಸಿದೆ
: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ರವರಿಗೆ ಕಳುಹಿಸಿದೆ.
: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ಬೆಂಗಳೂರು ರವರಿಗೆ ಕಳುಹಿಸಿದೆ.
: ವಲಯ ಆಯುಕ್ತರು, ಯಲಹಂಕ ವಲಯ ರವರಿಗೆ ಕಳುಹಿಸಿದೆ.
: ಜಂಟಿ ಆಯುಕ್ತರು (ಯಲಹಂಕ) ರವರಿಗೆ ಕಳುಹಿಸಿದೆ.
: ಮುಖ್ಯ ಅಭಿಯಂತರರು (ಯಲಹಂಕ) ರವರಿಗೆ ಕಳುಹಿಸಿದೆ.
: ಮಾಹಿತಿ ತಂತ್ರಜ್ಞಾನ ಸಲಹೆಗಾರರುರವರಿಗೆ ಕಳುಹಿಸುತ್ತಾ, ಸದರಿಯವರು ಮೊಬೈಲ್ ಫೋನ್, ಮತ್ತು ಸಿಮ್‌ಕಾರ್ಡ್ ಅನ್ನು ಪಾಲಿಕೆಗೆ ಹಿಂದಿರುಗಿಸಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು.
: ಕಾರ್ಯಪಾಲಕಅಭಿಯಂತರರು (ಯೋಜನೆ-ಯಲಹಂಕ) ವಿಭಾಗ ರವರಿಗೆ ಕಳುಹಿಸಿದೆ.
: ಮು.ಲೆ.ಅ / ಮು.ಲೆ.ಪ ರವರಿಗೆ ರವರಿಗೆ /ಉ.ನಿ (ಹಣಕಾಸು-ಯಲಹಂಕ) ರವರಿಗೆ ಕಳುಹಿಸಿದೆ.
: ಸಂಬಂಧಪಟ್ಟ ಅಭಿಯಂತರರಿಗೆ / ಕಛೇರಿ ಪ್ರತಿ.